Sri DIGAMBAR RAO BALWANT RAO.—Out of 19,505 candidates, only, 6,902 have been employed. Is this the proportion in respect of other candidates also generally ?

Sri M. V. RAMA RAO.—It would be difficult to say that this is the proportion in respect of other candidates ; it will have to be worked out.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು ? ಕೆಲಸ ಸಿಕ್ಕಿರುವ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು ?

ಶ್ರೀ ಎಂ. ವಿ. ರಾಮರಾವ್.—ಅವರ ಪೈಕಿ ಹೆಣ್ಣು ಮಕ್ಕಳು ಎಷ್ಟು ಎಂಬುದಕ್ಕೆ ಸಂಖ್ಯೆ ಇಲ್ಲಿ ಇಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಯಾವ ಯಾವ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಎಷ್ಟು ಜನಕ್ಕೆ ಸಿಕ್ಕಿದೆ ಎಂಬುದಕ್ಕೆ ಅಂಕಿ ಸಂಖ್ಯೆ ಸಿಕ್ಕುತ್ತದೆಯೇ ?

ಶ್ರೀ ಎಂ. ವಿ. ರಾಮರಾವ್.—ಅದು ಸಿಕ್ಕುವುದಿಲ್ಲ. ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ಅದು ಇರುತ್ತದೆ ಎಂತ ಅನಿಸುವುದಿಲ್ಲ.

Sri K. H. PATIL.—May I know how many of them are employed in Class IV and other clerical and other ministerial jobs ?

Sri M. V. RAMA RAO.—Actually this kind of compilation would not be made in the Employment Exchange. But, as far as possible, candidates whose suitability for particular jobs is obvious from the registers are sponsored for employment.

Sri J. P. SARVESH.—A candidate has to renew his card every three months. Will it not be better to extend the time to six months because it is difficult particularly for the candidates coming from villages and taluks ?

Sri M. V. RAMA RAO.—Actually there should be no difficulty in renewing the registration, because no fee is levied. Except a formal written request, nothing else is required.

Mr. DEPUTY SPEAKER.—Sri Azeez Sait may put Question No. 294.

Exemption to Small Land Holders for Levy

*Q.—294. Sri AZEEZ SAIT (Narasimharaja) [On behalf of Sri S BANGARAPPA (Sorab)].—

Will the Minister for Food and Civil Supplies be pleased to state :—

whether they would consider the feasibility of exempting small land holders from giving paddy and collect only half the quantity of paddy fixed in respect of other as per the compulsory paddy procurement order from the ryots of some of the villages in Sorab constituency due to failure of crops since three to four years for want of rains ?

A.—**Sri B. D. JATTI** (Minister for Food and Civil Supplies).—

In view of the existing provisions in the Levy Orders, this question does not arise.

Sri AZEEZ SAIT.—Will the Government think of exempting small land holders from levy of paddy ?

Sri B. D. JATTI.—Sir, those holdings, which measure one acre or less, are exempted and there is no other provision in the Essential Commodities Act to exempt other land holders.

ಶ್ರೀ ಸಿದ್ದಯ್ಯ ಕಾಶೀಮಠ.—ಮಳೆ ಆಗದೆ ಎರಡು ಮೂರು ಭಾಗಗಳಲ್ಲಿ ಬತ್ತ ಕ್ಷೀಣಿಗಿ ಹೋಗಿರುವುದರಿಂದ 5 ಎಕರೆ ಜಮೀನು ಇರುವವರಿಗೆ ರೆಮಿಷನ್ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಲೆವಿ ವಸೂಲು ಮಾಡುವುದು ಭೂಮಿಯ ಆಕಾರದ ಮೇಲೆ ಅಲ್ಲ. ಮಳೆಯ ಮೇಲೆಯೂ ಅಲ್ಲ, ಏನ್ತೀರ್ಣದ ಮೇಲೆಯೂ ಅಲ್ಲ. ಬೆಳೆಯ ಮೇಲಿನ ಪ್ರಮಾಣದಲ್ಲಿ ಇರುತ್ತದೆ. ಅದಕ್ಕೆ ಒಂದು ಫಾರ್ಮ್ ಇದೆ. ಉಳಿದರೆ ಕೊಡುತ್ತಾರೆ. ಇಲ್ಲದಿದ್ದರೆ ಕೊಡುವ ಕಾರಣವಿಲ್ಲ.

Sri DIGAMBAR RAO BALWANT RAO.—Is the Hon'ble Minister aware that paddy is being collected even in areas where it is not grown ?

Sri B. D. JATTI.—If paddy is not grown it is not necessary for the farmer to pay levy at all.

Sri AZEEZ SAIT.—Has it not come to the notice of the Government that for small holders, with a large family, having five acres and less, paddy and other commodities grown are not at all sufficient for their own use ?

Sri B. D. JATTI.—Sir, the discretion is to be used by the farmer whether he should give according to the notice issued by the authorities concerned, or to determine his surplus. He can mention what are his requirements for his family, for the dependents and workers, and if anything remains he can give, otherwise he may not.

Sri AZEEZ SAIT.—Has it come to the notice of the Government that the requests made to officers have been rejected by the officers ?

Sri B. D. JATTI.—Under the Essential Commodities Act there is provision for appeal. If the requests of the farmers are rejected, they can go in appeal.

ಶ್ರೀ ಜಿ. ರಾಮೇ ಗಾಣಡ.—ಪಹಣ ರೆಕ್ಕದಲ್ಲಿಲ್ಲದೆ ಬೆಳೆ ಆಗದೆ ಇದ್ದರೂ ಲೆವಿಯನ್ನೂ ವಸೂಲ್ಮಾಡಲು ಓರ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಅಂಥದ್ದು ತಮ್ಮ ಕ್ಷೇತ್ರದಿಂದ ಇದುವರೆಗೆ ಏನೂ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ.—ಭೂ ಕಂದಾಯ ನಸ್ಸೆಂಡ್ ಆಗಿರುವ ಜಿಲ್ಲೆಗಳಲ್ಲಿ ಲೆವಿ ವಸೂಲ್ಮಾಡಲಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಸಸ್ಪೆನ್‌ಷನ್‌ಗೂ ಲೆವಿಗೂ ಸಂಬಂಧವಿಲ್ಲ. ಭೂಮಿಯಲ್ಲಿ ಬೆಳೆ ಬಾರದೆ ಇದ್ದರೆ ಲೆವಿ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಒಂದು ಎಕರೆ ಮತ್ತು ಅದಕ್ಕಿಂತ ಕಡಮೆ ಜಮೀನು ಇರುವವರಿಂದಲೂ ಲೆವಿ ವಸೂಲ್ಮಾಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಅದನ್ನು ತಪ್ಪಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ನನ್ನ ಕಡೆಗೆ ಕೆಲವು ಇನ್‌ಫರ್ಮೇಷನ್ ಕೊಟ್ಟಿದ್ದಾರೆ. ಅದರ ಬಗ್ಗೆ ರಿಪೋರ್ಟ್ ಕರೆದಿದ್ದೇನೆ. ಅದರಲ್ಲಿ ಏನಾದರೂ ಸತ್ಯಾಂಶವಿದ್ದರೆ ಅವಶ್ಯ ಕ್ರಮ ತೆಗೆದುಕೊಳ್ಳುತ್ತೇನೆ.

Sri M. MALLAPPA.—Has the Government got the sanction of Legislature for compulsory paddy procurement order ?

Sri B. D. JATTI.—Sir, if the member reads the Essential Commodities Rules, he will come to know what it is. It is amply made clear there.

Sri AZEEZ SAIT.—Has it come to the notice of the Government that force is being used to collect levy from the farmers who are unable to pay anything in Shimoga District ?

Sri B. D. JATTI.—No force is used. But on the contrary Government have issued instructions not to use force for collecting levy.

Sri AZEEZ SAIT.—Has the Government received representations from the ryots saying that force is used by the officers in Shimoga District to collect levy ? Will the Government make an enquiry and check the high handedness of the officials ?

Sri B. D. JATTI.—If there are representations, the Government will definitely look into them. No force is used for collecting levy.

Sri AZEEZ SAIT.—The reply given by the Minister is one sided. Will the Government be pleased to look into the complaints made by the ryots ?

(No reply)

ಶ್ರೀ ಕೆ. ಎಚ್. ಪಾಟೀಲ್.—ಲ್ಯಾಂಡ್ ರೆವೆನ್ಯೂ ಸಸ್ಪೆಂಡ್ ಆಗಬೇಕಾದರೆ ಅಲ್ಲ ಬೆಳೆ ಬಂದಿಲ್ಲ ಎನ್ನುವ ಕಾರಣದಿಂದ ಸಸ್ಪೆನ್‌ಷನ್ ಆಗುತ್ತದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಲ್ಯಾಂಡ್ ರೆವೆನ್ಯೂ ಸಸ್ಪೆಂಡ್ ಆದಂಥ ಪ್ರದೇಶಗಳಲ್ಲಿ ಲೆವಿ ವಸೂಲ್ಮಾಡುವುದಕ್ಕೆ ಅವಕಾಶವಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಲ್ಯಾಂಡ್ ರೆವೆನ್ಯೂ ಸಸ್ಪೆಂಡ್ ಆಗುವುದಕ್ಕೆ ಕಾನೂನು ಬೇರೆ, ಲೆವಿ ವಸೂಲ್ಮಾಡುವ ಕಾನೂನು ಬೇರೆ. ಲೆವಿ ವಸೂಲ್ಮಾಡುವ ಕಾನೂನು ಪ್ರಕಾರ, ಭೂ ಕಂದಾಯ ಸಸ್ಪೆಂಡ್ ಆಗಿದ್ದರೂ ಕೂಡ ಬೆಳೆ ಆಗಿರುವ ಕಡೆ ಲೆವಿ ವಸೂಲ್ಮಾಡಬೇಕಾಗುತ್ತದೆ. ಅದಕ್ಕೂ, ಇದಕ್ಕೂ ಸಂಬಂಧವಿಲ್ಲ. ಭೂ ಕಂದಾಯವನ್ನು ಸಸ್ಪೆಂಡ್ ಮಾಡಿರುವ ಕಡೆ ಭಾವಿ ಇದ್ದವರು ಬೆಳೆ ಚೆನ್ನಾಗಿ ಮಾಡುತ್ತಾರೆ. ಅಂಥ ಕಡೆ ವಸೂಲ್ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಉತ್ತರ ಕರ್ನಾಟಕ ಜಿಲ್ಲೆಯಲ್ಲಿ, ಅದರಲ್ಲೂ ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಬಡವರಿಂದ ಲೆವಿ ವಸೂಲ್ಮಾಡಿ, ಪ್ರಾಸಿಕ್ಯೂಷನ್ ಕೇಸುಗಳನ್ನು ಹಾಕಿ, ಸಾಹುಕಾರರನ್ನು ಬಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಎಲ್ಲಿಯಾದರೂ ಆ ರೀತಿ ಅನ್ಯಾಯವಾಗಿದ್ದರೆ ಅದಕ್ಕೆ ತಕ್ಕ ಕ್ರಮವನ್ನು ಸಂಬಂಧಪಟ್ಟವರಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎಂ. ಹೆಗಡೆ.—ಒಂದು ಎಕರೆ ಒಂದು ಕುಂಟೆ ಇದ್ದವರಲ್ಲ ಹೋಗಿ ಲೆವಿ ವಸೂಲ್ಮಾಡಿ ಒಂದು ಎಕರೆ ಇದ್ದವರ ಕತೆಯಿಂದ ವಸೂಲ್ಮಾಡುವುದಿಲ್ಲ. ಇದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಯಾವುವಾದರೂ ಒಂದು ಲಿಮಿಟ್ ಗೊತ್ತುಮಾಡಿದ ನಂತರ ಐದು ಎಕರೆ ಮಿನಿಮಂ ಇದ್ದರೆ, ಐದು ಎಕರೆ ಇರುವವರಿಂದ ವಸೂಲ್ಮಾಡುವುದಿಲ್ಲ, ಐದು ಎಕರೆ ಒಂದು ಕುಂಟೆ ಇದ್ದರೆ ವಸೂಲ್ಮಾಡಬೇಕಾಗುತ್ತದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ರೈತರು ಲೆವಿ ಕೊಡದೆ ಹೋದರೆ ಅಂಥವರು ತಮ್ಮ ಮಕ್ಕಳು ಶಾಲೆಗೆ ಹೋಗಲು ತಹಸೀಲ್ದಾರರ ಹತ್ತಿರ ನರ್ಟಿಫಿಕೇಟ್ ಆಫ್ ಇನ್‌ಕಂ ಕೇಳಿದರೆ ಅದನ್ನು ಕೊಡಬಾರದೆಂದು ಅವರಿಗೆ ಏನಾದರೂ ಆದೇಶ ಕೊಟ್ಟಿದ್ದೀರಾ ! ಈ ರೀತಿ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಇದು ನನ್ನ ಗಮನಕ್ಕೆ ಬಂದಿಲ್ಲ. ನರ್ಟಿಫಿಕೇಟಿಗೂ ಲೆವಿಗೂ ಯಾವ ತರಹ ಸಂಬಂಧವೂ ಇಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—ತಾಸೀಲ್ದಾರರು ಕೊಡುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಒಂದು ವರ್ಷದ ವಿದ್ಯಾಭ್ಯಾಸ ಹಾಳಾಗಿ ಹೋಗುತ್ತಾ ಇದೆ. ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಆ ರೀತಿ ಮಾಡಿದರೆ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದು ಕೊಳ್ಳಬಹುದೋ ಆ ರೀತಿ ತೆಗೆದುಕೊಳ್ಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದಿರಿ. ಕಾರವಾರ ಜಿಲ್ಲೆಯಲ್ಲಿ ಜೋಳದ ಧಾರಣೆ ಗೌರ್ನಮೆಂಟ್ ರೇಟ್ 58 ರೂಪಾಯಿ ಎಂದು. ಅಧೀಸರನ್ನು ಕೇಳಿದರೆ ಆದೇಶ ಬಂದಿಲ್ಲ ಎಂದು ಹೇಳುತ್ತಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಶ್ರೀ ಕೆ. ಹೆಚ್. ಪಾಟೀಲರು ಕೇಳಿದ್ದಾರೆ. ಇನ್‌ಸ್ಪೆಕ್ಷನ್ ಕಳಿಸಿದ್ದೇನೆ. ಯಾವ ತಾಲ್ಲೂಕು ಅಧಿಕಾರಿಗಳು ಇಲ್ಲ ಎಂದು ಹೇಳಿದರೆ ಅದರ ಬಗ್ಗೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಡೆಪ್ಯೂಟಿ ಕಮೀಷನರ ಹತ್ತಿರ ಹೋಗಿ ಕೇಳಿದರೆ ಅವರು ಆ ರೀತಿ ಆದೇಶ ಬಂದಿಲ್ಲ ಎಂದು ಹೇಳುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ಆ ರೀತಿ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಕೆಳಗಿನ ಅಧಿಕಾರಿ ಗಳು ಹೇಳಿದರೆ 5 ಮಿನಿಟ್ ನನ್ನ ಛೇಂಬರಿಗೆ ಬನ್ನಿ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿರು ವುದಕ್ಕೆ ವರದಿ ಕೊಡುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಲೆವಿ ಕೊಡದೇ ಇರತಕ್ಕ ರೈತರ ಮೇಲೆ ಸ್ಥಳೀಯ ಅಧಿಕಾರಿ ಗಳು ಕೇಸು ಹಾಕಿರತಕ್ಕದ್ದನ್ನು ಸರ್ಕಾರದವರು ನೇರವಾಗಿ ಅಧಿಕಾರಿಗಳನ್ನು ಕೇಳಿದೆ ವಾಪಸು ತೆಗೆದುಕೊಂಡಿರತಕ್ಕದ್ದು, ಏಜಿವೇ ?

ಶ್ರೀ ಬಿ. ಡಿ. ಜತ್ತಿ.—ಅಂಥಾದ್ದು ಏನೂ ಮಾಡುವುದಕ್ಕಾಗುವುದಿಲ್ಲ. ಅಧಿಕಾರಿಗಳ ವರವಿ ಇಲ್ಲದೆ, ಯೋಗ್ಯ ಇದೆಯೆ ಎಂದು ವಿಚಾರ ಮಾಡದೇ ಕೇಸು ವಾಪಸ್ಸು ತೆಗೆದುಕೊಳ್ಳ ವುದಕ್ಕಾಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಸುಗ್ಗಿಯ ಕಾಲದಲ್ಲಿ ಲೆವಿ ವಸೂಲು ಮಾಡುವುದಕ್ಕೆ ಟೈಂ ನಿಗದಿ ಮಾಡದೇ ವರ್ಷವೆಲ್ಲಾ ವಸೂಲು ಮಾಡುತ್ತಾ ಇರುತ್ತಾರೆ. ಬೆಳೆ ಬಂದ ಕಾಲದಲ್ಲಿ ಲೆವಿ ಕೊಡಬಹುದು. ಕಾಲ ಮೀರಿ ಬಂದಮೇಲೆ ರೇಟು ಜಾಸ್ತಿ ಆದಾಗ ಕಡಿಮೆ ರೇಟಿನಲ್ಲಿ ಕೊಡಿ ಎಂದರೆ ನನ್ನಂಥವನಿಗೆ ಕಷ್ಟವಾಗುತ್ತದೆ. ಸಣ್ಣಪುಟ್ಟ ರೈತರಿಂದ ಏನಾದರೂ ಇಂತಿಷ್ಟು ಕಾಲದೊಳಗೆ ಲೆವಿ ವಸೂಲ್ ಮಾಡಬೇಕೆಂದು ನಿಗದಿ ಮಾಡಿದ್ದೀರಾ ? ಸುಗ್ಗಿಯಾದ 3-4 ತಿಂಗಳ ಒಳಗೆ ಲೆವಿ ವಸೂಲು ಮಾಡಿ ಮುಗಿಸಬೇಕು. ಕೊಡುವವನಿಗೂ ಲೆವಿ ವಸೂಲು ಮಾಡುವವನಿಗೂ ಆಗ ಅನುಕೂಲವಾಗುತ್ತದೆ.

ಶ್ರೀ ಬಿ. ಡಿ. ಜತ್ತಿ.—ಬೆಳೆ ತೆಗೆದುಕೊಂಡಕೂಡಲೇ ಲೆವಿ ವಸೂಲು ಮಾಡಬೇಕು ಎಂದು ಹೇಳಿದೆ. ಒಂದು ಬೆಳೆ ಆದರೆ ಒಂದು ಸಲ, ಎರಡು ಬೆಳೆ ಆದರೆ ಎರಡು ಸಲ, ಮೂರು ಬೆಳೆ ಆದರೆ ಮೂರು ಸಲ ವಸೂಲು ಮಾಡುವುದಕ್ಕೆ ಸರ್ಕಾರಕ್ಕೆ ಹಕ್ಕು ಇದೆ. ಸುಗ್ಗಿ ಮಾಡಿದ ಕೂಡಲೇ ರೈತನು ಲೆವಿ ಕೊಡಕೂಡದು ಎಂದು ನಿರ್ಬಂಧ ಮಾಡಿಲ್ಲ. ಅಧೀಸರು ಕೇಳಿದೇ ಇದ್ದರೂ ರೈತನು ಕೊಟ್ಟರೆ ಆಗುತ್ತದೆ. ನೋಟೀಸ್ ತಕ್ಷಣ ಕೊಟ್ಟಿರುತ್ತಾರೆ. ಯಾವ ಕಾರಣದ ಸಲುವಾಗಿ ಲೆವಿ ಕೊಡುವುದು ತಡವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ. ಲೆವಿ ತಕ್ಷಣ ತೆಗೆದು ಕೊಳ್ಳಬೇಕು ಎಂದು.

ಶ್ರೀ ಟಿ. ಎಸ್. ಶಿವಣ್ಣ.—ತರೀಕೆರೆ ತಾಲ್ಲೂಕಿನಲ್ಲಿ ಲೆವಿ ಕೊಡದೇ ಇರತಕ್ಕವರ ಮೇಲೆ ಸಾವಿರಾರು ಕೇಸು ಹಾಕಿದ್ದಾರೆ. ಒಂದು ಕೆ.ಜಿ. ಕಡಿಮೆ ಕೊಟ್ಟವರ ಮೇಲೂ ಕೇಸು ಹಾಕಿ

ಹತ್ತು ರೂಪಾಯಿ ಜುಲ್ಮಾನೆ ಹಾಕಿದ್ದಾರೆ. ಪೈರು ಆಗದೇ ಇದ್ದರೂ ನಿರ್ಬಂಧವಾಗಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಇನ್‌ಕಂ ಸರ್ಟಿಫಿಕೇಟ್ ಕೊಡುವುದಕ್ಕೆ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟು ಸರಿಯಾಗಿ ನಡೆಯುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಸರಕಾರಿ ಅಧಿಕಾರಿಗಳಿಗೆ ಸರಿಯಾದ ತಿಳುವಳಿಕೆ ಕೊಟ್ಟಿದ್ದೇವೆ. ಅವಶ್ಯ ಇದ್ದರೆ ಇನ್ನೂ ಕೊಡೋಣ. ಕಾನೂನು ಪ್ರಕಾರ ಒಂದು ಕೆ.ಜಿ. ಕಡಿಮೆ ಕೊಟ್ಟರೂ ಕೊಡ ಅದು ಅಪರಾಧವಾಗುತ್ತದೆ. ಅದರ ಸಲುವಾಗಿ ನಮಗೆ ಇನ್‌ಸ್ಪೆಕ್ಷನ್ ಕೊಡುವುದು ಕಷ್ಟ ವಾಗುತ್ತದೆ.

Irrigation wells in Mysore Sub-Division.

*Q.—641. Sri M. BASAVARAJU (Krishnarajanagar).—

Will the Minister for Revenue and Forests be pleased to state :—

the number of irrigation wells in Mysore Sub-Division and the extent of lands cultivated by each (Talukwise figure requested) ?

A.—Sri G. B. SHANKARA RAO (Deputy Minister for Revenue).—

	No. of wells	*Extent of Land cultivated—Acres*
Mysore	93	465
K. R. Nagar	26	103
Hunsur	127	254
Periyapatna	59	325
H. D. Kote	47	196
Total	**352**	**1,343**

ಶ್ರೀ ಎಂ. ಬಸವರಾಜು.—ಈ ಸಬ್‌ಡಿವಿಷನ್‌ನಲ್ಲಿ ಸಾಕಷ್ಟು ನೀರಿನ ಅನುಕೂಲ ಇದ್ದು ಸರ್ಕಾರದವರಿಂದ ಸಾಕಾದಷ್ಟು ಸಹಕಾರ ಸಿಕ್ಕಿದೇ ಇರುವುದರಿಂದ ಅಲ್ಲಿಯ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಇದು ಒಂದೇ ಕಡೆ ಅಲ್ಲ ; ಎಲ್ಲಾ ಕಡೆ ನೀರಾವರಿ ಬಾವಿ ಗಳಿಗಾಗಿ ಸಾಕಷ್ಟು ಹಣ ಒದಗಿಸುತ್ತಿದ್ದೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಈ ವರ್ಷ ಸುಮಾರು, 5 ಕೋಟಿ ಚಿಲ್ಲರೆ ರೂಪಾಯಿ ಬಾವಿ ತೆಗೆಸುವುದಕ್ಕೆ ವಿತರಣೆ ಮಾಡುವ ಯೋಜನೆ ಇದೆ.

ಶ್ರೀ ಎಸ್. ಎಂ. ಗುರಪ್ಪಡ್ಡಿ.—ಅಂಡರ್‌ಗ್ರೌಂಡ್ ನೀರನ್ನು ಶೋಧನೆಮಾಡಲು ಪ್ರತ್ಯೇಕ ಸಿಬ್ಬಂದಿಯನ್ನು ನೇಮಕ ಮಾಡಿದೆಯೇ ! ರೈತರು ಬಾವಿ ತೋಡಿ ನೀರು ದೊರೆಯದೆ ಹಾಳಾಗುತ್ತಿರುವುದರಿಂದ ನೀರು ಬಾವಿ ಇಂಥ ಜಾಗದಲ್ಲಿ ತೋಡಿದರೆ ದೊರೆಯುತ್ತದೆ ಎಂದು ತಿಳಿಸಲು ಪ್ರತ್ಯೇಕ ಶಾಖೆ ಮಾಡಿದ್ದೀರಾ ?

ಶ್ರೀ ಜಿ. ಬಿ. ಶಂಕರರಾವ್.—ಜಿಯಲಾಜಿಕಲ್ ಇಲಾಖೆಯವರು ಅಂಡರ್ ಗ್ರೌಂಡ್ ವಾಟರ್ ಬಗ್ಗೆ ಸರ್ವೆ ಮಾಡುತ್ತಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಬಾವಿಗೆ ಹಣ ಕೊಟ್ಟರೂ ಸಾಕಷ್ಟು ನೀರು ದೊರೆಯದೆ ವ್ಯವಸಾಯಕ್ಕೆ ಅನುಕೂಲವಾಗದೆ ಕೊಟ್ಟಿರುವ ಸಾಲವನ್ನು ತೀರಿಸಲು ಸಾಧ್ಯವಾಗದಿರುವುದು ಗಮನಕ್ಕೆ ಬಂದಿದೆಯೇ ?